ತೆಗೆಯುತ್ತೇನಾದುದರಿಂದ ಬುದ್ಧಿಜೀವಿ ಎಂಬ ಆರೋಪ! ನಿಜವಾಗಿ ನೋಡಿದರೆ ಪ್ರತಿಯೊಬ್ಬ ಮನುಷ್ಯ ಭಾವ ಮತ್ತು ಬುದ್ಧಿಗಳ ಒಂದಲ್ಲ ಒಂದು ಮಟ್ಟದ ಮಿಶ್ರಣ. ನಮ್ಮ ಮಿದುಳಿನ ಎಡ ಭಾಗ ತರ್ಕದ ಕೇಂದ್ರವಾದರೆ ಬಲ ಭಾಗ ಭಾವನೆಗಳ ಕೇಂದ್ರವಂತೆ. ನಮ್ಮ ಆಧುನಿಕ ಶಿಕ್ಷಣ ಮಿದುಳಿನ ಎಡ ಭಾಗವನ್ನು ಪೋಷಿಸುತ್ತಿದೆಯೆಂದೂ, ಬಲ ಭಾಗವನ್ನು ಪೋಷಿಸುತ್ತಲಿಲ್ಲವಾದುದರಿಂದ ನಮ್ಮ ಹೊಸ ಜನಾಂಗ ಭಾವನಾತ್ಮಕವಾಗಿ ದುರ್ಬಲಗೊಳ್ಳುತ್ತಿದೆ ಎಂದೂ ವಿಶ್ಲೇಷಣೆಗಳನ್ನು ಓದಿದ್ದೇನೆ. ವಾಸ್ತವಿಕವಾಗಿ ಈ ಎರಡೂ ಕೇಂದ್ರಗಳ ಬೆಳವಣಿಗೆ ಸಮತೋಲನದಿಂದ ನಡೆಯಬೇಕು. "ಬುದ್ಧಿ, ಭಾವಗಳ ವಿದ್ಯುದಾಲಿಂಗನ"ದಿಂದ ಅತ್ಯುತ್ತಮ ಕವಿತೆ ಸಂಭವಿಸುವುದೆಂದು ಕುವೆಂಪು ಅವರು ಹೇಳಿದರಷ್ಟೇ? ಅಂದರೆ ಬುದ್ಧಿ ಮತ್ತು ಭಾವಗಳು ಎರಡು ಧ್ರುವಗಳೆಂದು ತಿಳಿಯೋಣ. ಇವುಗಳಲ್ಲಿ ಸಮತೋಲನ ಇದ್ದರೆ ಮಾತ್ರ ವಿದ್ಯುತ್ ಸಮನಾಗಿ ಹರಿದು ಆಲಿಂಗನ ಸರಿ ಹೋಗುತ್ತದೆ. ಇಲ್ಲವಾದರೆ ಶಾರ್ಟ್ ಸರ್ಕಿಟ್ ಆಗುತ್ತದೆ. ನಮ್ಮ ಹಲವು ಕವಿತೆಗಳನ್ನು ಓದಿದಾಗ ಯಾಕೆ ಶಾಕ್ ಹೊಡೆಯುವುದೆಂಬುದೂ ಇದರಿಂದ ತಿಳಿಯುತ್ತದೆ. ಅರ್ಥಿಂಗ್ ಬಗೆಗೂ ಯೋಚಿಸಬೇಕಾಗುತ್ತದೆ!

ತಮಾಷೆ ಹಾಗಿರಲಿ. ಭಾವವೇ ಇರಲಿ, ಬುದ್ಧಿಯೇ ಇರಲಿ ಅದೇ ಅಂತಿಮ ಸತ್ಯವಲ್ಲ. ಆದರೆ ಸತ್ಯದರ್ಶನಕ್ಕೆ ಅವು ಸಾಧನಗಳು ನಿಜ. ಇನ್ನೊಂದು ಮಹತ್ವದ ಮಾತೆಂದರೆ ಅವೆರಡೂ ವಿರುದ್ಧ ಪದಗಳೂ ಅಲ್ಲ. ಬುದ್ಧಿಯ ಬಲವಿಲ್ಲದ ಭಾವಮಯತೆ ಉದ್ರೇಕವೋ, ಆವೇಶವೋ ಆಗಿ ಉಕ್ಕಿ ಹರಿಯಬಹುದು. ಅದು ಬರಿಯ ಗೋಳು. ಭಾವನಾಮಯತೆಯಿಲ್ಲದ ಬುದ್ಧಿವಂತಿಕೆ ಬರಡು, ಶುಷ್ಕ, ಅದೊಂದು ರಸದಾರಿದ್ರ್ಯದ ಬಾಳು.



ಹಿರಿಯರನ್ನು 'ಬುದ್ಧೀ' ಎಂದು ಕರೆಯುವ ರೂಢಿ ಇದೆಯಷ್ಟೆ? 'ಒಡ್ಯಾ', 'ಧಣೀ' ಎಂಬ ಸಂಬೋಧನೆಗಳಂತೆಯೇ ಇದೂ ವಾಡಿಕೆಯಲ್ಲಿದೆಯಾದರೂ ನನಗೆ ಇದು ಯಾವಾವ ಸಂದರ್ಭದಲ್ಲಿ ಬಳಕೆ ಆಗುತ್ತದೆ ಎಂಬ ಕುರಿತು ಕುತೂಹಲವಿದೆ. ನಮ್ಮೆದುರಿಗಿರುವವರ ಬುದ್ಧಿವಂತಿಕೆಯನ್ನು ಗುರುತಿಸಿ ಹೀಗೆ ಹೇಳುವುದೋ ಅಥವಾ ಇದು ಅವರ ಬುದ್ಧಿಶಕ್ತಿಯನ್ನು ಜಾಗೃತಗೊಳಿಸುವ ಹುನ್ನಾರವೋ? ಬೆಳಗಾವಿಯ ಸಾಹಿತ್ಯ ಸಮ್ಮೇಳನದಲ್ಲಿ ಬಸವರಾಜ ಕಟ್ಟೀಮನಿಯವರು ವೇದಿಕೆಯಿಂದ ಮಾತನಾಡುವಾಗಲೂ ಅನೇಕ ಸಲ ದೇವರಾಜ ಅರಸರನ್ನು 'ಬುದ್ಧೀ' ಎಂದೇ ಕರೆದರು. ಅರಸರು ಆಗತಾನೇ ಅಧಿಕಾರ ಕಳೆದುಕೊಂಡಿದ್ದರು. ಅವರ ಶಿಷ್ಯರೇ ಇವರಿಗೆ ಖೋ ಕೊಟ್ಟು ಮುಖ್ಯಮಂತ್ರಿಯಾಗಿದ್ದರು. ಅರಸರು ತಮ್ಮ ಭಾಷಣದಲ್ಲಿ ಕಟ್ಟೀಮನಿಯವರು 'ಬುದ್ಧೀ' ಎಂದು ತನ್ನನ್ನು ಯಾವ ಅರ್ಥದಲ್ಲಿ ಕರೆದಿರಬಹುದು ಎಂದು ಇಡೀ ಸಭೆ ಭಾವುಕವಾಗುವಂತೆ ಪ್ರಶ್ನಿಸಿಕೊಂಡರು. ಅರಸರು ಅಸಾಮಾನ್ಯ ವಿವೇಕಿಗಳಾಗಿದ್ದರು ಎಂದು ಇವತ್ತು ಇತಿಹಾಸ ಹೇಳುತ್ತದೆ. ಅಂಥವರೂ ತಮ್ಮ ಬುದ್ಧಿಶಕ್ತಿಯ ಮಿತಿಯ ಕುರಿತು ಯೋಚಿಸಬೇಕಾದ ಸನ್ನಿವೇಶಗಳು ಜೀವನದಲ್ಲಿ ಬರುವುದುಂಟು. ಬುದ್ಧಿಗಿಂತ ಹೆಚ್ಚಿನದು ಇನ್ನೇನೋ ಇದೆ ಎಂದು ಅಂಥ ಸಮಯಗಳಲ್ಲಿ ತೋರುವುದು. ಅದನ್ನು ಹಿರಿಯರು ಅದೃಷ್ಟದಾಟ ಎಂದು ಕರೆದರು. ಇದು ಬುದ್ಧಿಯ ಮಹತ್ವ ಕಡಿಮೆ ಮಾಡಲು ಹೇಳುವ ಮಾತಲ್ಲ. "ಪುರುಷಬುದ್ಧಿಯೆ ಸಾಕು ವರಸಿದ್ಧಿಗೆಂದಲ್ಲ, ಪರಮೇಶ ಕರುಣೆ ಅನವಶ್ಯವೆಂದಲ್ಲ" ಎಂಬ ಮಂಕುತಿಮ್ಮನ ಸಾಲುಗಳನ್ನು ನೆನಪಿಸಿಕೊಳ್ಳಿ. ಬುದ್ಧಿಯ ಪ್ರಯತ್ನ ನಡೆಯುತ್ತಲೇ ಇರಬೇಕು. ದೈವಾನುಗ್ರಹ ಮುಂದಿನದು. ಅದಿಲ್ಲದೆ ಎಂಥ ಬುದ್ಧಿವಂತನೂ ಏನೂ ಮಾಡಲಾಗದು. ಆದರೆ 'ಬುದ್ಧಿ ಪ್ರಕಾಶ'ದಿಂದ 'ಅಂತರನುಭವ ಶೋಧೆ', ವಿಚಾರ ಮಂಥನ ನಡೆಯುತ್ತಿರಬೇಕು. ಇದು ಹಿರಿಯರು ತೋರಿದ ದಾರಿ.

ವಿದ್ಯೆಯು ಬುದ್ಧಿಯಾಗುವುದು ಸ್ವಯಂ ಪ್ರಜ್ಞೆಯಿಂದ. ಸ್ವಯಂ ಪ್ರಜ್ಞೆ ಎಂಬ ಪದ ಪ್ರಯೋಗ